# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು–572 103

ಸಂಖ್ಯೆ: ತುವಿ:ಅವಿ:2025–26/1846 ದಿನಾಂಕ:09.09.2025

**"ಸುತ್ತೋಲೆ"**

ವಿಷಯ:"ಸಂವಿಧಾನ ಅರಿವು ಅಭಿಯಾನ" ಕಾರ್ಯಕ್ರಮ ನಡೆಸಲು ಅವಕಾಶ ನೀಡುವ ಕುರಿತು.

ಉಲ್ಲೇಖ:1. ಜನಸ್ಪಂದನ ಟ್ರಸ್ಟ್, ತಿಪಟೂರು ಇವರ ಪತ್ರ ದಿನಾಂಕ:08.09.2025

2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:08.09.2025

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಂವಿಧಾನ ಅರಿವು ಎಂಬ ಎರಡು ದಿನಗಳ ಜನಸ್ಪಂದನ ಯೋಜನಾ ಕಾರ್ಯಾಗಾರವನ್ನು ದಿನಾಂಕ:10.05.2025 ರಿಂದ 11.05.2025 ರವರೆಗೆ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಆಯೋಜಿಸಲಾಗಿದ್ದು, ಈ ಸಂಬಂಧ ಕಾರ್ಯಾಗಾರದ ಆಶಯದಂತೆ ಅತ್ಯುತ್ತಮ ನಾಲ್ವರು ವಿದ್ಯಾರ್ಥಿಗಳಿಗೆ ಐದು ಸಾವಿರ ರೂಪಾಯಿ ನಗದು, ಅಪ್ಪಟ ಬೆಳ್ಳಿ ಪದಕ ಮತ್ತು ಸರ್ಟಿಫಿಕೇಟ್ ಮತ್ತು ಉತ್ತಮ 10 ವಿದ್ಯಾರ್ಥಿಗಳಿಗೆ 2,500/– ನಗದು, ಅಪ್ಪಟ ಬೆಳ್ಳಿ ಪದಕ ಹಾಗೂ ಸರ್ಟಿಫಿಕೇಟ್ ನೀಡುವುದು ಜನಸ್ಪಂದನ ಸಂಕಲ್ಪವಾಗಿದೆ. ಸದರಿ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ದಿನಾಂಕ:24.09.2025 ರಂದು ತುಮಕೂರು ವಿವಿ ಆವರಣದಲ್ಲಿ ಆಯೋಜಿಸಲು ಉದ್ದೇಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಇದರ ಪೂರ್ವಭಾವಿಯಾಗಿ ಜಿಲ್ಲೆಯ ಪ್ರಥಮದರ್ಜೆ ಕಾಲೇಜುಗಳಲ್ಲಿ **"ಸಂವಿಧಾನ ಅರಿವು ಅಭಿಯಾನ"** ಕಾರ್ಯಕ್ರಮ ನಡೆಸಲು ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭಕ್ಕೆ ವಿದ್ಯಾರ್ಥಿಗಳನ್ನು ಆಹ್ವಾನಿಸಲು ಉದ್ದೇಶಿಸಲಾಗಿದೆ.

ಈ ಸಂಬಂಧ ಮೇಲ್ಕಂಡ ಉದ್ದೇಶಿತ "ಸಂವಿಧಾನ ಅರಿವು ಅಭಿಯಾನ" ಕಾರ್ಯಕ್ರಮವನ್ನು ತಮ್ಮ ಕಾಲೇಜುಗಳ ಹಂತಗಳಲ್ಲಿ ನಡೆಸಲು ಜನಸ್ಪಂದನ ಟ್ರಸ್ಟ್ ಇವರಿಗೆ ಅವಕಾಶ ಕಲ್ಪಿಸಿ ಸಹಕರಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಸಹಿ/– ೧೧.೦೮.೨೦೨೫

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

**ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ ಮತ್ತು ಎಲ್ಲಾ ಸಂಯೋಜಿತ ಸರ್ಕಾರಿ ಪ್ರಥಮದರ್ಜೆ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ ತುಮಕೂರು.**

**ಪ್ರತಿಗಳು:**

1. ಡಾ. ಲಕ್ಷ್ಮೀರಂಗಯ್ಯ ಕೆ. ಎನ್. ಸಂಶೋಧನಾಧಿಕಾರಿ ಎಸ್‌ಸಿಪಿ/ಟಿಎಸ್‌ಪಿ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸಂವಿಧಾನ ಅರಿವು ಅಭಿಯಾನ ಕಾರ್ಯಕ್ರಮ ನಡೆಸಲು ಸಹಕರಿಸುವುದು.
2. ಶ್ರೀ ಸಿ. ಬಿ ಶಶಿಧರ್, ಅಧ್ಯಕ್ಷರು, ಜನಸ್ಪಂದನ ಟ್ರಸ್ಟ್, ಪಲ್ಲಾಗಟ್ಟಿ ಲೇಔಟ್, ರೋಟರಿ ಭವನದ ಹತ್ತಿರ, ಬಿ.ಹೆಚ್. ರಸ್ತೆ, ತಿಪಟೂರು, ತುಮಕೂರು ಜಿಲ್ಲೆ.
3. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು–ಈ ಸುತ್ತೋಲೆಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು ಮತ್ತು ಸಂಬಂಧಿಸಿದ ಕಾಲೇಜುಗಳಿಗೆ ಇ–ಮೇಲ್ ಕಳುಹಿಸುವುದು.
4. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಕಚೇರಿ ಪ್ರತಿ.